# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.

ಪ್ರಸ್ತುತ: **ಶ್ರೀಮತಿ. ಪಾರ್ವತಮ್ಮ.ಬಿ.,**
ಬಿ.ಎ., ಎಲ್.ಎಲ್.ಎಂ.
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ದಿನಾಂಕ 11 ನೇ ಸೆಪ್ಟೆಂಬರ್ - 2024

## ಅಸಲು ದಾವಾ ಸಂಖ್ಯೆ: 415/2011

**ವಾದಿ** : ಜಯಮ್ಮ ಮತ್ತು ಇತರರು
(ವಾದಿ ಪರ ಶ್ರೀ.ಹೆಚ್.ಎಸ್.ಎಸ್.ವಕೀಲರು)

**ವಿರುದ್ಧ**

**ಪ್ರತಿವಾದಿಗಳು** : ರಾಮೇಗೌಡ ಮತ್ತು ಇತರರು
(ಪ್ರತಿವಾದಿಗಳ ಪರ ಶ್ರೀ.ಬಿ.ಎಸ್.ವಕೀಲರು)

## ಮಧ್ಯಂತರ ಅರ್ಜಿ ನಂ-XII

**ಅರ್ಜಿದಾರರು** : ದೀಪು

**ವಿರುದ್ಧ**

**ಎದುರುದಾರರು** : ಪ್ರತಿವಾದಿಗಳಾದ 5 ರಿಂದ 7 ರವರಾದ ಹೆಚ್.ಜೆ.ದಿನೇಶ್, ಮುಖ್ಯಾಧಿಕಾರಿಗಳು ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳು

| | |
|---|---|
| 1. Provision under which the application is filed | U/o 39 Rule 1 and 2 of CPC |
| 2. Relief sought for | Temporary injunction |
| 3.The date on which the application is filed | 13-06-2024 |
| 4. Number of the application | IA.No.XII |

| | |
|---|---|
| 5. The date on which the objections are filed by different opponents | 22-06-2024 |
| 6. The date on which the orders were passed on the said application | 11-09-2024 |

**(ಪಾರ್ವತಮ್ಮ.ಬಿ)**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಪಾಂಡವಪುರ.**

## ದಿವಾನಿ ಪ್ರಕಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಕೆಳಗೆ ಸಲ್ಲಿಸಿದ ಮಧ್ಯಂತರ ಅರ್ಜಿ ನಂ.12 ರ ಮೇಲೆ ಮಾಡಲಾದ ಆದೇಶ

ವಾದಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಮಾದೇಶ-39, ನಿಯಮ-1 ಮತ್ತು 2 ರಅಡಿಯಲ್ಲಿ ಮಧ್ಯಂತರ ಅರ್ಜಿ-12ನ್ನು ಸಲ್ಲಿಸಿ, ಈ ದಾವೆಯ ಪ್ರತಿವಾದಿಗಳಾದ 5 ರಿಂದ 7 ರವರಾದ ಹೆಚ್.ಜೆ.ದಿನೇಶ, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯ್ತಿ, ಪಾಂಡವಪುರ ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳ ವಿರುದ್ಧ ಈ ಅರ್ಜಿಯ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯ ಮಧ್ಯಾಂತರ ನಿರ್ಭಂಧಕಾಜ್ಞೆ ಹೊರಡಿಸಿ, ಈ ದಾವೆ ಇತ್ಯರ್ಥವಾಗುವವರೆಗೆ ಷೆಡ್ಯೂಲ್ ಸ್ವತ್ತಿನ ಹಣವನ್ನು ಎಲ್.ಎ.ಸಿ.ನಂಬರ್:02/2013 ರಲ್ಲಿ ಠೇವಣಿ ಮಾಡದಂತೆ ಮತ್ತು ರಾಜಿ ಮಾಡಿಕೊಳ್ಳದಂತೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**2.** ಮಧ್ಯಂತರ ಅರ್ಜಿ ನಂ.12 ರ ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು.

**3.** ಪ್ರತಿವಾದಿಗಳು ಸದರಿ ವಾದಿಯ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ. ಮಧ್ಯಂತರ ಅರ್ಜಿ ನಂ.12 ಕ್ಕೆ ಸಲ್ಲಿಸಿರುವ ತಕರಾರನ್ನು ಪರಿಶೀಲಿಸಲಾಯಿತು.

**4.** ವಾದಿಯ ಅರ್ಜಿ ಮತ್ತು ಪ್ರತಿವಾದಿಗಳ ತಕರಾರಿನ ಮೇಲೆ ಈ ಕೆಳಗಿನ ಅಂಶಗಳು ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**5.** ವಾದಿಯ ಅರ್ಜಿ, ಪ್ರಮಾಣಪತ್ರ, ಪ್ರತಿವಾದಿಯರ ತಕರಾರು, ಮತ್ತು ಹಾಜರುಪಡಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವವಾಗಿರುತ್ತವೆ.

## <u>ಅಂಶ</u>

1. ಮಧ್ಯಂತರ ಅರ್ಜಿ ಮೇಲ್ನೋಟಕ್ಕೆ ವಾದಿಯ ಪರವಾಗಿ ಸಾಭೀತು ಆಗಬಹುದಾದಂತಹ ಪ್ರಕರಣವೆಂದು ತೋರಿಸಲ್ಪಡುವರೇ?

2. ಸದರಿ ದಾವೆಯ ಮಧ್ಯಂತರ ಪರಿಹಾರ ಪಡೆಯಲು ಹೆಚ್ಚು ಅನುಕೂಲ ವಾದಿಯ ಪರವಾಗಿದೆಯೆಂದು ತೋರಿಸಲ್ಪಡುವರೇ?

3. ತಾತ್ಕಾಲಿಕ ತಡೆಯಾಜ್ಞೆಯನ್ನು ನ್ಯಾಯಾಲಯವು ನೀಡದೆ ಹೋದ ಪಕ್ಷದಲ್ಲಿ ವಾದಿಗೆ ತುಂಬಲಾರದ ಹಾನಿಯಾಗಿ ಅದರಿಂದ ಪ್ರತಿವಾದಿಯರಿಗೆ ಯಾವುದೇ ಹಾನಿ ಮತ್ತು ತೊಂದರೆ ಉಂಟಾಗುವುದಿಲ್ಲವೆಂದು ತೋರಿಸಲ್ಪಡುವರೇ?

4. ಆದೇಶವೇನು?

**6.** ವಾದಿ ಮತ್ತು ಪ್ರತಿವಾದಿಯರ ಮಾನ್ಯ ವಕೀಲರ ವಾದ ಆಲಿಸಿ, ಉಭಯಪಕ್ಷಗಾರರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ ನಂ.1ಃ ನಕಾರಾತ್ಮಕವಾಗಿ
ಅಂಶ ನಂ.2ಃ ನಕಾರಾತ್ಮಕವಾಗಿ
ಅಂಶ ನಂ.3ಃ ನಕಾರಾತ್ಮಕವಾಗಿ
ಅಂಶ ನಂ.4ಃ ಅಂತಿಮ ಆದೇಶದಂತೆ ಈ ಕೆಳಕಂಡ

## <u>ಕಾರಣಗಳು</u>

**7. <u>ಅಂಶ ನಂ.1ಃ-</u>** ವಾದಿಗಳು ತಮ್ಮ ಮಧ್ಯಂತರ ಅರ್ಜಿಯ ಜೊತೆಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ತಾವುಗಳು ಪ್ರತಿವಾದಿಯರ ವಿರುದ್ಧ ಭಾಗಾಂಶದ ದಾವೆಯನ್ನು ದಾಖಲಿಸಿದ್ದು, ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತು ಪಾಂಡವಪುರ ಪಟ್ಟಣದ ಸಾರ್ವಜನಿಕರ ಉದ್ದೇಶಕ್ಕಾಗಿ ಒಳಚರಂಡಿ ವ್ಯವಸ್ಥೆಗೆ ಪ್ರತಿವಾದಿ 6 ಮತ್ತು 7 ರವರು ಭೂ ಸ್ವಾಧೀನ ಪಡಿಸಿಕೊಂಡಿದ್ದು, ಆ ಸಂಬಂಧ

ಅವಾರ್ಡ್ ನೋಟೀಸಿನ ಮೇರೆಗೆ ಪರಿಹಾರದ ಹಣವನ್ನು ಘೋಷಣೆ ಮಾಡಿದ್ದು, ಸದರಿ ಷೆಡ್ಯೂಲ್ ಹಣವನ್ನು ತಮ್ಮ ಭಾಗಾಂಶದ ಹಣವೆಂದು ಪರಿಗಣಿಸಬೇಕಾಗಿ ದಾವೆಯನ್ನು ದಾಖಲಿಸಿರುತ್ತಾರೆ.

ತಾವುಗಳು ತಮ್ಮ ಒಟ್ಟು ಕುಟುಂಬದಲ್ಲಿ ಬಿನ್ನಾಭಿಪ್ರಾಯ ಏರ್ಪಟ್ಟ ಕಾರಣ ಒಟ್ಟು ಕುಟುಂಬದಲ್ಲಿ ಮುಂದುವರೆಯಲು ಸಾಧ್ಯವಾಗುವುದಿಲ್ಲವೆಂದು ಒಟ್ಟು ಕುಟುಂಬದ ಸದಸ್ಯರ ವಿರುದ್ಧ ಅಸಲು ದಾವಾ ಸಂಖ್ಯೆ 465/1999 ರ ರೀತ್ಯಾ ದಾವೆಯನ್ನು ನ್ಯಾಯಾಲಯದಲ್ಲಿ ಪ್ರತಿವಾದಿಯರಾದ 1 ರಿಂದ 4 ರವರ ವಿರುದ್ಧ ಮತ್ತು ತಮ್ಮ ಅಜ್ಜಿಯಾದ ಮೃತ ಪುಟ್ಟಮ್ಮ ರವರ ವಿರುದ್ಧ ದಾಖಲು ಮಾಡಿದ್ದು, ನಂತರ ಸದರಿ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರ ನಡುವೆ ದಾವೆಯು ವಿಚಾರಣೆಯಾಗಿ ಗುಣಾಂಶಗಳ ಆಧಾರದ ಮೇಲೆ ಇತ್ಯರ್ಥವಾಗಿದ್ದು, ಒಟ್ಟು ಕುಟುಂಬದ ಆಸ್ತಿಗಳಲ್ಲಿ ತಮಗೆ 7/24 ನೇ ಭಾಗಾಂಶದ ಹಿಸ್ಸೆಯನ್ನು ನ್ಯಾಯಾಲಯ ನೀಡಿರುತ್ತದೆ.

ಮುಂದುವರೆದು ಅಸಲು ದಾವಾ ಸಂಖ್ಯೆ 465/1999 ರ ಡಿಕ್ರಿ ಆದೇಶದಂತೆ ಅಂತಿಮ ಡಿಕ್ರಿಯಾದೇಶ ಪಡೆಯಲು ನ್ಯಾಯಾಲಯದಲ್ಲಿ ಎಫ್.ಡಿ.ಪಿ.ನಂಬರ್‌ಃ 01/2001 ರ ರೀತ್ಯಾ ಅರ್ಜಿಯನ್ನು ದಾಖಲಿಸಿದ್ದು, ನ್ಯಾಯಾಲಯವು ಡಿಕ್ರಿಯಾದೇಶ ರೀತ್ಯಾ ಕಮೀಷನರ್ ರವರನ್ನು ನೇಮಕ ಮಾಡಿ ತಾಲ್ಲೂಕು ಸರ್ವೇಯರ್ ರವರ ಕಡೆಯಿಂದ ಸ್ಕೆಚ್ ಮತ್ತು ವರದಿಯನ್ನು ತರಿಸಿಕೊಂಡು, ಆ ಮೇರೆಗೆ ತಮಗೆ ಪಾಂಡವಪುರ ತಾಲ್ಲೂಕು, ಕಸಬಾ ಹೋಬಳಿ, ಪಾಂಡವಪುರ ಗ್ರಾಮದ ಸರ್ವೆ ನಂಬರ್‌ಃ 72/2 ರಲ್ಲಿ 0.5 ¾ ಗುಂಟೆ ಮತ್ತು ಸರ್ವೆ ನಂಬರ್‌ಃ 71/1 ರಲ್ಲಿ 0.13 ¾ ಗುಂಟೆ ಜಮೀನನ್ನು ನ್ಯಾಯಾಲಯ ಅಂತಿಮ ಡಿಕ್ರಿಯಾದೇಶದ ರೀತ್ಯಾ ನೀಡಿರುತ್ತದೆ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ತಾವುಗಳು ಸಂಪೂರ್ಣ ಮಾಲೀಕರಾಗಿ ಸ್ವಾಧೀನಾನುಭವದಲ್ಲಿದ್ದುಕೊಂಡು ಬರುತ್ತಿದ್ದಾರೆ.

ಮುಂದುವರೆದು, ಸದರಿ ಎಫ್.ಡಿ.ಪಿ ನಂಬರ್‌ಃ 01/2001 ರ ರೀತ್ಯದ ಡಿಕ್ರಿ ಆದೇಶದಂತೆ ತಮ್ಮಗಳ ವೈಯಕ್ತಿಕ ಸಮಸ್ಯೆಗಳಿಂದ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ತಮ್ಮ ಭಾಗಾಂಶದ ಸ್ವತ್ತುಗಳ ಖಾತೆಯು ಸಹ ತಮ್ಮ ಅಜ್ಜಿಯಾದ ಮೃತ ಪುಟ್ಟಮ್ಮ ರವರ ಹೆಸರಿನಲ್ಲಿ 2010 ರ ವರೆಗೆ ಮುಂದುವರೆದುಕೊಂಡು ಬಂದಿದ್ದು, ಈ ದಾವೆಯಲ್ಲಿ ಉದ್ದೇಶಿತ ಪ್ರತಿವಾದಿಗಳಾಗಿ ಸೇರ್ಪಡೆಗೊಳ್ಳಲು ಸಲ್ಲಿಸಿರುವ ಅರ್ಜಿಯ ಉದ್ದೇಶಿತ ಪ್ರತಿವಾದಿಗಳು ಪಾಂಡವಪುರ ಪಟ್ಟಣದ ನಾಗರೀಕರ ಅನುಕೂಲದ ಉದ್ದೇಶಕ್ಕಾಗಿ ಒಳಚರಂಡಿಯ ಉದ್ದೇಶಕ್ಕಾಗಿ ಪಾಂಡವಪುರ ಪಟ್ಟಣದ

ನಾಗರೀಕರ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಂಡಿದ್ದು, ಸದರಿ ಭೂ ಸ್ವಾಧೀನದಲ್ಲಿ ದಾವಾ ಸ್ವತ್ತು ಸಹ ಸೇರ್ಪಡೆಯಾಗಿದ್ದು, ಉದ್ದೇಶಿತ ಪ್ರತಿವಾದಿಗಳಾದ ಪಾಂಡವಪುರ ಉಪ ವಿಭಾಗಾಧಿಕಾರಿಯವರು ಎಲ್.ಎ.ಕ್ಯೂ(2)56/2009-10 ರ ರೀತ್ಯಾ ನೋಟಿಫಿಕೇಷನ್ ಹೊರಡಿಸಿದ್ದು, ಸದರಿ ಪ್ರಕ್ರಿಯೆಯಂತೆ 4(1), 6(1) ಮತ್ತು ಅವಾರ್ಡ್ ನೋಟೀಸುಗಳನ್ನು ಭೂ ಸ್ವಾಧೀನವಾದ ಅರ್ಜಿದಾರರಿಗೆ ನೀಡಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತು ತನ್ನ ಅಜ್ಜಿಯಾದ ಮೃತ ಪುಟ್ಟಮ್ಮ ರವರ ಹೆಸರಿನಲ್ಲಿದ್ದ ಕಾರಣ ಅವರ ಹೆಸರಿಗೆ ನೊಟೀಸ್ ನೀಡಿದ್ದು, ಈ ಮೇಲ್ಕಂಡ ಎಲ್ಲಾ ಸಂಗತಿಗಳು ತಮ್ಮ ಗಮನಕ್ಕೆ ಬಂದ ತಕ್ಷಣ ತಾವುಗಳು ಎಫ್.ಡಿ.ಪಿ.ನಂಬರ್:01/2001 ರ ಅಂತಿಮ ಡಿಕ್ರಿ ಆದೇಶದಂತೆ ರೆವಿನ್ಯೂ ಅಧಿಕಾರಿಗಳ ಮುಂದೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಾಗ ತಮ್ಮ ಗಮನಕ್ಕೆ ಬಂದಂತಹ ಸಂಗತಿಗಳೇನೆಂದರೆ, ಈ ದಾವೆಯ 2 ನೇ ಪ್ರತಿವಾದಿಯಾದ ಚಂದ್ರೇಗೌಡ ನಾಗರಾಜು ಎಂಬ ವ್ಯಕ್ತಿಯ ಕಡೆಯಿಂದ ಆತನ ವೈಯಕ್ತಿಕ ಕಾರಣಗಳಿಗಾಗಿ ಕೈಸಾಲ ಪಡೆದುಕೊಂಡಿದ್ದು, ಆ ಸಂಬಂಧವಾಗಿ ನಾಗರಾಜು ಎಂಬುವವರು 2 ನೇ ಪ್ರತಿವಾದಿಯ ವಿರುದ್ಧ ಹಣ ವಸೂಲಾತಿ ಕೋರಿ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಯಲ್ಲಿ 2 ನೇ ಪ್ರತಿವಾದಿಯ ವಿರುದ್ಧ ಡಿಕ್ರಿ ಪಡೆದುಕೊಂಡಿದ್ದು, ಡಿಕ್ರಿ ಹಣವನ್ನು 2 ನೇ ಪ್ರತಿವಾದಿ ಪಾವತಿ ಮಾಡದ ಕಾರಣ ಸರ್ವೆ ನಂಬರ್: 72/2 ರ 0.20 ಗುಂಟೆಯನ್ನು ನ್ಯಾಯಾಲಯವು ಹರಾಜು ಪ್ರಕ್ರಿಯೆ ನಡೆಸಿದ್ದು, ಸದರಿ ಹರಾಜಿನಲ್ಲಿ 5 ನೇ ಪ್ರತಿವಾದಿ ಭಾಗವಹಿಸಿ ಹರಾಜಿನ ಮೂಲಕ ಪಡೆದುಕೊಂಡಿದ್ದು, ತಮಗೆ ಎಫ್.ಡಿ.ಪಿ.ನಂಬರ್: 01/2001 ರ ಡಿಕ್ರಿಯಾದೇಶದ ರೀತ್ಯಾ ತಮಗೆ ಸರ್ವೆ ನಂ.72/2 ರಲ್ಲಿ 0.20 ಗುಂಟೆ ಪೈಕಿ 0.5 ¾ ಗುಂಟೆ ಭಾಗಾಂಶಕ್ಕೆ ಬಂದಿದ್ದು, ಆ ಸ್ವತ್ತು ಸಹ ಹರಾಜು ಪ್ರಕ್ರಿಯೆಗೆ ಒಳಪಟ್ಟಿದ್ದು, ತಮ್ಮ ಭಾಗಾಂಶದ ಸ್ವತ್ತನ್ನು ಸಹ ಸೇರಿಸಿಕೊಂಡು 5 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿ ಮತ್ತು ನಾಗರಾಜು ರವರ ನಡುವೆ ನಡೆದ ಪ್ರಕರಣ ತಮ್ಮ ಗಮನಕ್ಕೆ ಬಂದಿರುವುದಿಲ್ಲ. ಆ ವ್ಯವಹಾರಕ್ಕೂ ತಮಗೂ ಸಹ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ತಮ್ಮ ಗಮನಕ್ಕೆ ಬಂದ ತಕ್ಷಣ ಪ್ರಸ್ತುತ ದಾವೆಯನ್ನು ಹರಾಜು ಪ್ರಕ್ರಿಯೆಯ ಕ್ರಯದಾರರಾದ 5 ನೇ ಪ್ರತಿವಾದಿ ಮತ್ತು ಪ್ರತಿವಾದಿಯರಾದ 1 ರಿಂದ 4 ರವರ ವಿರುದ್ಧ ಭಾಗಾಂಶದ ಪರಿಹಾರಕ್ಕಾಗಿ ದಾವೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, 2 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿಯರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಲ್.ಎ.ಸಿ.ನಂಬರ್: 01/2013 ಮತ್ತು ಎಲ್.ಎ.ಸಿ.ನಂಬರ್: 02/2013 ರ ರೀತ್ಯಾ ಹೆಚ್ಚುವರಿ ಭೂ ಪರಿಹಾರ ಕೋರಿ ಅರ್ಜಿಯನ್ನು ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ತಮ್ಮ ಭಾಗಾಂಶದ ದಾವಾ ಷೆಡ್ಯೂಲ್ ಸ್ವತ್ತು ಸಹ ಸೇರಿರುತ್ತದೆ. ಆ ಕಾರಣದಿಂದ ಸದರಿ

ಎಲ್.ಎ.ಸಿ.ನಂಬರ್‌ಃ 02/2013 ರ ಅರ್ಜಿಯಲ್ಲಿ ಅವಶ್ಯಕ ಪಕ್ಷಕಾರರಾಗಿ ಸೇರ್ಪಡೆಗೊಳ್ಳಲು ತಾವುಗಳು ಅರ್ಜಿಯನ್ನು ದಾಖಲಿಸಿದ್ದು, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ತಾವು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದು, ಸದರಿ ಆದೇಶದ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ W.P.ನಂಬರ್‌ಃ 34539/2018 ರ ರೀತ್ಯಾ ದಾಖಲಿಸಿದ್ದು, ಸದರಿ ಉಚ್ಚ ನ್ಯಾಯಾಲಯ ಸಹ ಸದರಿ ಅರ್ಜಿಯನ್ನು ವಜಾ ಮಾಡಿ, ದಾವಾ ಷೆಡ್ಯೂಲ್ ಆಸ್ತಿಯಲ್ಲಿ ತಮಗೆ ಹಕ್ಕಿದ್ದ ಪಕ್ಷದಲ್ಲಿ ನ್ಯಾಯಾಲಯದಲ್ಲಿರುವ ಅಸಲು ದಾವಾ ಸಂಖ್ಯೆ 415/2011 ರ ಪ್ರಸ್ತುತ ದಾವೆಯಲ್ಲಿ ಇತ್ಯರ್ಥಪಡಿಸಿಕೊಳ್ಳುವಂತೆ ಆದೇಶ ಮಾಡಿದ್ದು, ಆ ಕಾರಣದಿಂದ ಉದ್ದೇಶಿತ ಪ್ರತಿವಾದಿಗಳನ್ನು ಸೇರ್ಪಡೆ ಮಾಡಲು ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ನ್ಯಾಯಾಲಯ ಉದ್ದೇಶಿತ ಪ್ರತಿವಾದಿಗಳನ್ನಾಗಿ ಸೇರ್ಪಡೆ ಮಾಡಲು ಸಲ್ಲಿಸಿದ್ದ ಅರ್ಜಿಯನ್ನು ದಿನಾಂಕಃ 23.06.2023 ರಂದು ಪುರಸ್ಕಾರ ಮಾಡಿದ್ದು, ಪ್ರತಿವಾದಿಗಳಾದ 6 ರಿಂದ 11 ರವರು ಸದರಿ ದಾವೆಯಲ್ಲಿ ಉದ್ದೇಶಿತ ಪ್ರತಿವಾದಿಗಳಾಗಿ ಸೇರ್ಪಡೆಯಾಗಿದ್ದು, ನ್ಯಾಯಾಲಯ ಮಧ್ಯಂತರ ಅರ್ಜಿ ಸಂಖ್ಯೆ 07 ಅನ್ನು ಪುರಸ್ಕಾರ ಮಾಡಿರುತ್ತದೆ.

ಮುಂದುವರೆದು, ಪಾಂಡವಪುರ ಪಟ್ಟಣದ ನಾಗರೀಕರ ಅನುಕೂಲದ ಉದ್ದೇಶಕ್ಕಾಗಿ ಒಳಚರಂಡಿಯ ಕಾಮಗಾರಿ ಮಾಡಲು ಪಾಂಡವಪುರ ಪಟ್ಟಣದ ನಾಗರೀಕರ ಜಮೀನುಗಳನ್ನು ಉದ್ದೇಶಿತ ಪ್ರತಿವಾದಿಗಳಾದ 6 ರಿಂದ 11 ರವರು ಭೂ ಸ್ವಾಧೀನ ಮಾಡಿಕೊಂಡು ಎಲ್.ಎ.ಕ್ಯೂ (2) 56/2009-10 ರ ಮೇರೆಗೆ ನೋಟಿಫಿಕೇಷನ್ ಹೊರಡಿಸಿದ್ದು, ಭೂಮಿಯನ್ನು ಕಳೆದುಕೊಂಡು ನಾಗರೀಕರು ಉದ್ದೇಶಿತ ಪ್ರತಿವಾದಿಗಳ ಕಛೇರಿಗೆ ಹೆಚ್ಚಿನ ಭೂ ಪರಿಹಾರ ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದು, ಆ ಮೇರೆಗೆ ಉದ್ದೇಶಿತ ಪ್ರತಿವಾದಿಗಳು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅರ್ಜಿದಾರರ ಅರ್ಜಿಗಳ ಮೇಲೆ ಶಿಫಾರಸ್ಸು ಮಾಡಿದ್ದು, ಆ ಮೇರೆಗೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಎಲ್.ಎ.ಸಿ ಪ್ರಕರಣಗಳಲ್ಲಿ ಅರ್ಜಿದಾರರ ಅರ್ಜಿಗಳನ್ನು ಡಿಕ್ರಿ ಮಾಡಿ, ಸದರಿ ಡಿಕ್ರಿಯಾದೇಶದಂತೆ ಜಾರಿ ಅರ್ಜಿಗಳನ್ನು ಅರ್ಜಿದಾರರುಗಳು ದಾಖಲಿಸಿದ್ದು, ಆ ಪ್ರಕಾರ ಜಾರಿ ಸಂಖ್ಯೆ 18/2022 ರ ರಮೇಶ, ಜಾರಿ ಸಂಖ್ಯೆ 17/2022 ರ ರಾಜಮ್ಮ, ಜಾರಿ ಸಂಖ್ಯೆ 15/2022 ರ ಹೆಚ್.ಎಂ. ಅನುಸೂಯ, ಜಾರಿ ಸಂಖ್ಯೆ 16/2022 ರ ಬಿ.ತಮ್ಮೇಗೌಡ, ಜಾರಿ ಸಂಖ್ಯೆ 18/2022 ರ ಬಿ.ಟಿ.ಶ್ರೀನಿವಾಸಮೂರ್ತಿ ರವರುಗಳ ಜೊತೆ ಈ ದಾವೆಯ ಉದ್ದೇಶಿತ ಪ್ರತಿವಾದಿಗಳಾದ 6 ರವರು ರಾಜಿ ಮಾಡಿಕೊಂಡಿದ್ದು, ಅದರನುಸಾರ ಪರಿಹಾರದ ಹಣವನ್ನು ಪಾವತಿ ಮಾಡಿರುತ್ತಾರೆ. ಅದೇ ರೀತಿ ತಮ್ಮ ಮತ್ತು 5 ನೇ ಪ್ರತಿವಾದಿಯರ ನಡುವೆ ವಿವಾದದಲ್ಲಿರುವ ಎಲ್.ಎ.ಸಿ ನಂಬರ್‌ಃ 02/2013 ರ

ಪ್ರಕರಣದಲ್ಲಿಯೂ ಸಹ ಈ ದಾವೆಯ 5 ನೇ ಪ್ರತಿವಾದಿ ಮತ್ತು ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರ ನಡುವೆ ರಾಜಿ ಪ್ರಕ್ರಿಯೆ ಏರ್ಪಟ್ಟು ಆ ಸಂಬಂಧವಾಗಿ ಸಂಪೂರ್ಣ ಹಣವನ್ನು ಪಾವತಿ ಮಾಡಲು ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರ ನಡುವೆ ರಾಜಿ ಪ್ರಕ್ರಿಯೆ ಏರ್ಪಟ್ಟು ಆ ಸಂಬಂಧವಾಗಿ ಸಂಪೂರ್ಣ ಹಣವನ್ನು ಪಾವತಿ ಮಾಡಲು ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರು ಪ್ರಯತ್ನ ಪಡುತ್ತಿದ್ದು, ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ.

ಮುಂದುವರೆದು, ಪ್ರಸ್ತುತ ದಾವೆಯಲ್ಲಿ ದಾವಾ ಸ್ವತ್ತಾದ ಸರ್ವೆ ನಂಬರ್: 72/2 ರ 0.5 ¾ ಗುಂಟೆ ಜಮೀನು ತಮ್ಮ ಭಾಗಾಂಶದ ಜಮೀನಾಗಿದ್ದು, ಸದರಿ ಸ್ವತ್ತು ಸಹ ಎಲ್.ಎ.ಸಿ.ನಂಬರ್: 02/2013 ರ ಪ್ರಕರಣದಲ್ಲಿ 0.20 ಗುಂಟೆ ಪೈಕಿ 0.5¾ ಗುಂಟೆ ಜಮೀನು ಸೇರಿರುವುದರಿಂದ ಸಂಪೂರ್ಣ 0.20 ಗುಂಟೆಗೆ ಸಂಬಂಧಿಸಿದಂತೆ 5 ನೇ ಪ್ರತಿವಾದಿ ಮತ್ತು ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರ ನಡುವೆ ರಾಜಿ ಸಂಧಾನವಾಗಿ 0.20 ಗುಂಟೆಗೆ ಸಂಬಂಧಿಸಿದಂತೆ ಹಣವನ್ನು ಎಲ್.ಎ.ಸಿ.ನಂಬರ್: 02/2013 ರ ಪ್ರಕರಣದಲ್ಲಿ ಠೇವಣಿ ಮಾಡಿ ರಾಜಿ ಮಾಡಿಕೊಂಡರೆ ತಮಗೆ ಹಣದಿಂದ ಭರಿಸಲಾಗದಂತಹ ಕಷ್ಟ-ನಷ್ಟ ಉಂಟಾಗುತ್ತದೆ ಮತ್ತು ಅನಗತ್ಯ ವ್ಯಾಜ್ಯಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಈ ದಾವೆಯನ್ನು ನ್ಯಾಯಾಲಯದಲ್ಲಿ ಪ್ರತಿವಾದಿಯರ ವಿರುದ್ಧ ಸಲ್ಲಿಸಿ ಇಲ್ಲಿಯವರೆಗೆ ದಾವೆ ನಡೆಸಿದ್ದು, ಯಾವುದೇ ರೀತಿಯ ಪ್ರಯೋಜನಕ್ಕೆ ಬಾರದ ರೀತಿ ನಡವಳಿಕೆ ಉಂಟಾಗಿ ತಮಗೆ ತುಂಬಾ ತೊಂದರೆಯುಂಟಾಗುತ್ತದೆ.

ಮುಂದುವರೆದು, ನ್ಯಾಯಾಲಯದಲ್ಲಿ ಈ ಹಿಂದೆ ಮಧ್ಯಂತರ ಅರ್ಜಿ ಸಂಖ್ಯೆ: 08 ಅನ್ನು ದಾಖಲಿಸಿ ಉದ್ದೇಶಿತ ಪ್ರತಿವಾದಿಗಳಾಗಿ ಸೇರ್ಪಡೆಗೊಂಡಿರುವ 6 ಮತ್ತು 7 ರವರ ವಿರುದ್ಧ ಈ ಅರ್ಜಿಯ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಈ ಅರ್ಜಿಯಲ್ಲಿ ಕೋರಿರುವ ಪರಿಹಾರಕ್ಕೆ ಅನುಗುಣವಾಗಿ ಪರಿಹಾರ ಕೋರಿ ಅರ್ಜಿಯನ್ನು ದಾಖಲಿಸಿದ್ದು, ನ್ಯಾಯಾಲಯ ದಿನಾಂಕ: 04.12.2023 ರಂದು ಆದೇಶ ಮಾಡಿ ಈಗಾಗಲೇ W.P.No.12762/2023 ರಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ: 08 ರಲ್ಲಿ ಕೋರಿರುವ ಪರಿಹಾರಕ್ಕೆ ಅನುಗುಣವಾಗಿ ಆದೇಶ ಮಾಡಿರುವುದರಿಂದ ತಾವು ಸಲ್ಲಿಸಿರುವ ಮಧ್ಯಂತರ ಅರ್ಜಿ ನಂಬರ್: 08 ಅನ್ನು ಈ ಹಂತದಲ್ಲಿ ಗುಣಾಂಶಗಳ ಆಧಾರದ ಮೇಲೆ ಇತ್ಯರ್ಥ ಮಾಡುವುದು ಸಾಧ್ಯವಿರುವುದಿಲ್ಲ ಆ ಕಾರಣದಿಂದ ಮಧ್ಯಂತರ ಅರ್ಜಿ ಸಂಖ್ಯೆ: 08 ಊರ್ಜಿತವಲ್ಲವೆಂದು ಅಭಿಪ್ರಾಯಪಟ್ಟು ನ್ಯಾಯಾಲಯ ಆದೇಶ ಮಾಡಿರುತ್ತದೆ. ಈ ಆದೇಶವಾದ ನಂತರ 5 ನೇ ಪ್ರತಿವಾದಿಯು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ W.P.No.12762/2023

ರ ರಿಟ್ ಅರ್ಜಿಯಲ್ಲಿ ಮೆಮೋ ದಾಖಲಿಸಿ, ಈಗಾಗಲೇ ಕೆಳನ್ಯಾಯಾಲಯವಾದ ನ್ಯಾಯಾಲಯ ಮಧ್ಯಂತರ ಅರ್ಜಿ ಸಂಖ್ಯೆ 07 ಮತ್ತು 08 ಇತ್ಯರ್ಥವಾಗಿರುವುದರಿಂದ ತಾವು ಸಲ್ಲಿಸಿರುವ ರಿಟ್ ಅರ್ಜಿಯನ್ನು ಪುರಸ್ಕಾರ ಮಾಡಿದರೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ತಿಳಿಸಿ ಮೆಮೋ ದಾಖಲಿಸಿದ್ದು, ಉಚ್ಛ ನ್ಯಾಯಾಲಯವು ತಮಗೆ ಸ್ವಾತಂತ್ರ್ಯ ನೀಡಿ ಸೂಕ್ತ ಪರಿಹಾರವನ್ನು ಕಾನೂನುಬದ್ಧವಾಗಿ ಪಡೆದುಕೊಳ್ಳುವಂತೆ ತಿಳಿಸಿ ಆದೇಶ ಮಾಡಿರುವುದರಿಂದ ಹಾಗೂ ಈ ರಿಟ್ ಅರ್ಜಿ ಆದೇಶವಾದ ನಂತರ 5 ನೇ ಪ್ರತಿವಾದಿಯು 6 ಮತ್ತು 7 ನೇ ಪ್ರತಿವಾದಿಯೊಂದಿಗೆ ಷರೀಕಾಗಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಮಗೆ ಬರುವಂತಹ ಪರಿಹಾರದ ಹಣವನ್ನು ಸಹ ಸೇರಿಸಿಕೊಂಡು ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡು ಹಣ ಪಡೆದುಕೊಳ್ಳಲು ಹುನ್ನಾರ ನಡೆಸಿರುತ್ತಾರೆ. ಆ ಕಾರಣದಿಂದ ಸದರಿ ದಾವೆಯನ್ನು ನ್ಯಾಯಾಲಯ ತುರ್ತಾಗಿ ದಾವೆಯನ್ನು ಅಂತಿಮಗೊಳಿಸಿ ಕಾನೂನುಬದ್ಧ ಆದೇಶ ಮಾಡುವುದರ ಜೊತೆಗೆ ಈ ದಾವೆಯು ಇತ್ಯರ್ಥವಾಗುವವರೆಗೆ ಉದ್ದೇಶಿತ ಪ್ರತಿವಾದಿಗಳಾದ 6, 7 ಮತ್ತು 5 ನೇ ಪ್ರತಿವಾದಿಗಳ ನಡುವೆ ರಾಜಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ತಾವು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯದಲ್ಲಿ ದಾಖಲಿಸಿ, ನ್ಯಾಯಾಲಯ ಪ್ರಸ್ತುತ ಅಸಲು ದಾವಾ ಸಂಖ್ಯೆ 415/2011 ರ ದಾವೆ ಇತ್ಯರ್ಥವಾಗುವವರೆಗೆ ಪ್ರತಿವಾದಿಗಳಾದ 5 ರಿಂದ 7 ರವರ ವಿರುದ್ಧ ಮಧಂತರ ಆದೇಶ ಹೊರಡಿಸಿ, ಎಲ್.ಎ.ಸಿ.ನಂಬರ್‍ಃ 02/2013 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂಬರ್‍ಃ 72/2 ರ 0.20 ಗುಂಟೆಯ ಪೈಕಿ 0.5 ¾ ಗುಂಟೆಯ ಹೆಚ್ಚುವರಿ ಭೂ ಪರಿಹಾರದ ಹಣವನ್ನು ಠೇವಣಿ ಮಾಡದಂತೆ ಮತ್ತು ರಾಜಿ ಮಾಡಿಕೊಳ್ಳದಂತೆ, ಮಧ್ಯಂತರ ನಿರ್ಭಂಧಕಾಜ್ಞೆಯ ಆದೇಶದ ಮುಖಾಂತರ ಆದೇಶ ಮಾಡಿದರೆ ಪ್ರತಿವಾದಿಗಳಾದ 5 ರಿಂದ 7 ರವರಿಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ಈಗಾಗಲೇ ನ್ಯಾಯಾಲಯ ಸದರಿ ದಾವೆಯಲ್ಲಿ ಸರ್ವೆ ನಂಬರ್‍ಃ 72/2 ರ ಎಲ್.ಎ.ಕ್ಯೂ ನಂಬರ್‍ಃ 02/2008-09 ರ 2,22,832 ಹಣವನ್ನು 5 ನೇ ಪ್ರತಿವಾದಿಗೆ ಈ ದಾವೆ ಇತ್ಯರ್ಥವಾಗುವವರೆಗೆ ನೀಡದಂತೆ 7 ನೇ ಉದ್ದೇಶಿತ ಪ್ರತಿವಾದಿಯಾದ ವಿಶೇಷ ಭೂ ಸ್ವಾಧೀನಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳ ವಿರುದ್ಧ ಮಧ್ಯಂತರ ಆದೇಶ ನೀಡಿದ್ದು, ಅದೇ ರೀತಿ ಹೆಚ್ಚುವರಿ ಭೂ ಪರಿಹಾರದ ಹಣಕ್ಕೆ ಸಂಬಂಧಿಸಿದಂತೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಎಲ್.ಎ.ಸಿ.ನಂಬರ್‍ಃ 02/2013 ರ ಅರ್ಜಿಗೆ ಸಂಬಂಧಿಸಿದಂತೆ ತಮ್ಮ ಮಾಲೀಕತ್ವದ ದಾವಾ ಷೆಡ್ಯೂಲ್ ಸರ್ವೆ ನಂಬರ್‍ಃ 72/2 ರ 0.5 ¾ ಗುಂಟೆಗೆ ಸಂಬಂಧಿಸಿದಂತೆ ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶ ಮಾಡಿ ಠೇವಣಿ ಮಾಡದಂತೆ ಮತ್ತು 5 ರಿಂದ 7 ನೇ

ಪ್ರತಿವಾದಿಗಳು ರಾಜಿ ಮಾಡಿಕೊಳ್ಳದಂತೆ ಈ ದಾವೆ ಇತ್ಯರ್ಥವಾಗುವವರೆಗೆ ತಡೆಹಿಡಿಯುವುದು ಅತ್ಯವಶ್ಯಕವಾಗಿರುತ್ತದೆ.

ಈ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯ ಪುರಸ್ಕಾರ ಮಾಡಿದರೆ ಪ್ರತಿವಾದಿಗಳಾದ 5 ರಿಂದ 7 ರವರಿಗೆ ಯಾವುದೇ ತೊಂದರೆಯುಂಟಾಗುವುದಿಲ್ಲ. ಒಂದುವೇಳೆ ಪುರಸ್ಕಾರ ಮಾಡದಿದ್ದರೆ ತಮಗೆ ತುಂಬಾ ತೊಂದರೆಯುಂಟಾಗುತ್ತದೆ.

ಆದುದರಿಂದ ತಾವು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕಾರ ಮಾಡಿ ದಾವೆ ಇತ್ಯರ್ಥವಾಗುವವರೆಗೆ ಎಲ್.ಎ.ಸಿ.ನಂಬರ್ಃ 02/2013 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂ.72/2 ರ 0.5 ¾ ಗುಂಟೆಗೆ ಸಂಬಂಧಿಸಿದಂತೆ ಹೆಚ್ಚುವರಿ ಭೂ ಪರಿಹಾರದ ಹಣವನ್ನು ಉದ್ದೇಶಿತ ಪ್ರತಿವಾದಿಗಳಾದ 6 ಮತ್ತು 7 ರವರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಠೇವಣಿ ಮಾಡದಂತೆ ಮತ್ತು ರಾಜಿ ಮಾಡಿಕೊಳ್ಳದಂತೆ ಮಧ್ಯಂತರ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**8.** 5 ನೇ ಪ್ರತಿವಾದಿಯು ತಕರಾರನ್ನು ಸಲ್ಲಿಸಿ, ತಮ್ಮ ತಕರಾರಿನಲ್ಲಿ ಈ ದಾವೆಯು ಕಾನೂನು ಮತ್ತು ಸಂಗತಿಗಳ ರೀತ್ಯಾ ಊರ್ಜಿತವಾದುದ್ದಲ್ಲ ವಜಾಕರಿಸಲು ಭಾದ್ಯವಾಗಿರುತ್ತದೆ. ವಾದಿಯು ಸಲ್ಲಿಸಿರುವ ದಾವೆಯೇ ಊರ್ಜಿತವಾದುದಲ್ಲ, ಆದ ಕಾರಣ ಈ ಅರ್ಜಿಯು ಸಹ ಊರ್ಜಿತವಾದುದ್ದಲ್ಲ ವಜಾಗೊಳ್ಳಲು ಭಾಧ್ಯವಾಗಿರುತ್ತದೆ.

ವಾದಿಯರು ಅನುಸೂಚಿಯಲ್ಲಿ ಹೇಳಿರುವ ಸ್ವತ್ತಿನ ಮೇಲೆ ಯಾವುದೇ ರೀತಿ ಹಕ್ಕು ಅಧಿಕಾರ ಇರುವುದಿಲ್ಲ. ವಾದಿಯರಿಗೆ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಭಾಗಾಂಶದ ಹಕ್ಕು ಸಹ ಇರುವುದಿಲ್ಲ. ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ಅಂತಿಮ ಡಿಕ್ರಿಯು ಸಹ ಇರುವುದಿಲ್ಲ ಹಾಗೂ ಅಂತಹ ಯಾವುದೇ ಡಿಕ್ರಿಯು ಸಹ ಜಾರಿಯಾಗಿರುವುದಿಲ್ಲ.

ವಾದಪತ್ರದ ಅನುಸೂಚಿಯಲ್ಲಿನ ಸ್ವತ್ತು ಮತ್ತು ಈ ಮಧ್ಯಕಾಲೀನ ಅರ್ಜಿಯಲ್ಲಿನ ಅನುಸೂಚಿ ಸ್ವತ್ತು ಬೇರೆ ಬೇರೆಯಾಗಿರುತ್ತದೆ. ಮಧ್ಯಕಾಲೀನ ಅನುಸೂಚಿಯಲ್ಲಿ ಹೇಳಿರುವ ಸ್ವತ್ತು ಹಿರಿಯ ದರ್ಜೆ ಸಿವಿಲ್ ನ್ಯಾಯಾಲಯದಲ್ಲಿ ಎಲ್.ಎ.ಸಿ.ನಂ.2/2013 ರ ಕ್ಲೈಮು ಅರ್ಜಿಯಲ್ಲಿ ಇತ್ಯರ್ಥವಾಗಿರುವ

ಹಣದ ಮೌಲ್ಯ ಬೇರೆ ಬೇರೆಯಾಗಿರುತ್ತದೆ. ಪ್ರಸ್ತುತ ಮಧ್ಯಕಾಲೀನ ಅರ್ಜಿಯ ಅನುಸೂಚಿಯಲ್ಲಿ ಹೇಳಿರುವ ಸರ್ವೆ ನಂ.72/2 ರಲ್ಲಿನ 0.20 ಗುಂಟೆ ಜಮೀನಿನ ಮೌಲ್ಯವನ್ನು ಹಿರಿಯ ದರ್ಜೆ ಸಿವಿಲ್ ನ್ಯಾಯಾಲಯದಲ್ಲಿ ರೂ.2,00,00000/- (ಎರಡು ಕೋಟಿ) ಗಳನ್ನು ನಿಗದಿ ಪಡಿಸಿರುತ್ತದೆ. ಹಾಗೂ ಈ ಬಗ್ಗೆ 5 ಮತ್ತು 7 ನೇ ಪ್ರತಿವಾದಿಯರು ಒಪ್ಪಿ ದಿನಾಂಕಃ 17.06.2023 ರಂದು ರಾಜೀ ಅರ್ಜಿಯನ್ನು ಸಲ್ಲಿಸಿದ್ದು, ಹಿರಿಯ ದರ್ಜೆ ನ್ಯಾಯಾಲಯವು ಸದರಿ ಅರ್ಜಿಯ ಮನ್ನಿಸಲು ಯೋಗ್ಯವಾಗಿದೆ ಎಂಬ ತೀರ್ಮಾನಕ್ಕೆ ಬಂದಿರುತ್ತದೆ. ಆದ ಕಾರಣ ಅರ್ಜಿದಾರ / ವಾದಿಯು ಸಲ್ಲಿಸಿರುವ ಈ ಮಧ್ಯಕಾಲೀನ ಅರ್ಜಿಯು ಊರ್ಜಿತವಾದುದ್ದಲ್ಲ.

ಹಿರಿಯ ದರ್ಜೆ ಸಿವಿಲ್ ನ್ಯಾಯಾಲಯದಲ್ಲಿ ಮಧ್ಯಕಾಲೀನ ಅರ್ಜಿಯಲ್ಲಿ ಹೇಳಿರುವ ಸ್ವತ್ತಿನ ಬೆಲೆಯು ರೂ.2,00,00000/- ಗಳನ್ನು ನಿಗದಿ ಪಡಿಸಿರುವ ಕಾರಣ ಈ ಮೌಲ್ಯವು ನ್ಯಾಯಾಲಯದ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಮೀರಿರುವ ಕಾರಣ ಈ ಅರ್ಜಿಯು ಊರ್ಜಿತವಾದುದ್ದಲ್ಲ.

ಹಿರಿಯ ದರ್ಜೆ ಸಿವಿಲ್ ನ್ಯಾಯಾಲಯದ ಎಲ್.ಎ.ಸಿ.ನಂ.2/2013 ರ ಕ್ಲೈಮು ಅರ್ಜಿಯಲ್ಲಿ ವಾದಿಯರು ಅವರನ್ನು ಸೇರ್ಪಡೆ ಮಾಡಿಕೊಳ್ಳಲು ಸಲ್ಲಿಸಿದ ಅರ್ಜಿಯನ್ನು ಹಿರಿಯ ದರ್ಜೆ ಸಿವಿಲ್ ನ್ಯಾಯಾಲಯವು ದಿನಾಂಕಃ 11.07.2018 ರಂದು ವಜಾಗೊಂಡಿರುತ್ತದೆ.

ಅರ್ಜಿದಾರ/ ವಾದಿಯರು ಮಧ್ಯಕಾಲೀನ ಅರ್ಜಿಯ ಷೆಡ್ಯೂಲ್ ನಲ್ಲಿ ಹೇಳಿರುವ ಸರ್ವೆ ನಂ.72/2 ರಲ್ಲಿನ ವಿಸ್ತೀರ್ಣ 0.20 ಗುಂಟೆಯನ್ನು ಇದೇ ನ್ಯಾಯಾಲಯದ ಆವರಣದಲ್ಲಿ ನಡೆದ ಬಹಿರಂಗ ಹರಾಜಿನಲ್ಲಿ ಖರೀದಿಸಿ ಮಾಲೀಕರಾಗಿರುವ ಕಾರಣ ವಾದಿಯರು ಸಲ್ಲಿಸಿರುವ ಮಧ್ಯಕಾಲೀನ ಈ ಅರ್ಜಿಯು ಊರ್ಜಿತವಾದುದ್ದಲ್ಲ.

5 ನೇ ಪ್ರತಿವಾದಿಯು ಅನುಸೂಚಿ ಸ್ವತ್ತಾದ ಪಾಂಡವಪುರ ಗ್ರಾಮದ ಸರ್ವೆ ನಂ.72/2 ರಲ್ಲಿನ 0.20 ಗುಂಟೆ ಜಮೀನನ್ನು ಜಾರಿ ಅರ್ಜಿ ಸಂ.76/2000 ದಲ್ಲಿ ಪಾಂಡವಪುರ ಸಿವಿಲ್ ನ್ಯಾಯಾಲಯವು ದಿನಾಂಕಃ 19.11.2003 ಜಪ್ತಿಗೆ ಆದೇಶ ಮಾಡಿದ್ದು, ಅದರಂತೆ ದಿನಾಂಕಃ 24.12.2003 ರಂದು ಜಪ್ತಿಯಾಗಿರುತ್ತದೆ. ನಂತರ ದಿನಾಂಕಃ 07.02.2004 ರಂದು ಸೇಲ್ ವಾರೆಂಟನ್ನು ಹೊರಡಿಸಿರುತ್ತದೆ. ಆನಂತರ ಸ್ವತ್ತಿನ ಸ್ಥಳದಲ್ಲಿ ಮಾರಾಟವಾಗಿದ್ದು, ನಂತರ ಪಾಂಡವಪುರ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ನಡೆದ ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚು ಬೆಲೆಗೆ 5 ನೇ ಪ್ರತಿವಾದಿಯು ದಿನಾಂಕಃ

20.12.2005 ರಂದು ನ್ಯಾಯಾಲಯದ ಹರಾಜಿನಲ್ಲಿ ಖರೀದಿಸಿರುತ್ತಾರೆ. ನಂತರ ಸದರಿ ಖರೀದಿಯನ್ನು ಸ್ಥಿರಿಕರಿಸಿ, ಸದರಿ ಖರೀದಿ ಪತ್ರವು ಪಾಂಡವಪುರ ಉಪ-ವಿಭಾಗಧಿಕಾರಿಯವರಲ್ಲಿ ನೊಂದಣಿಯಾಗಿರುತ್ತದೆ.

5 ನೇ ಪ್ರತಿವಾದಿಯು ಖರೀದಿಯ ನಂತರ ಅನುಸೂಚಿ ಸ್ವತ್ತನ್ನು ಎಂ.ಆರ್.ನಂ.55/2008-09 ರ ರೀತ್ಯಾ ಖಾತೆ ಬದಲಾಯಿಸಿಕೊಂಡು ಮಾಲೀಕರಾಗಿ ಸ್ವಾಧೀನಾನುಭವದಲ್ಲಿದ್ದರು, ನಂತರ 4 ನೇ ಪ್ರತಿವಾದಿಯು ವಾದಿಯರ ಮತ್ತು 1 ರಿಂದ 3 ಮತ್ತು 5 ನೇ ಪ್ರತಿವಾದಿಯರ ಹಾಗೂ ಜಾರಿ ಅರ್ಜಿ ಸಂ.76/2000 ರ ಡಿಕ್ರಿಧಾರಕನ ವಿರುದ್ಧ 4 ನೇ ಪ್ರತಿವಾದಿಯು ಜಾರಿ ಅರ್ಜಿ ಸಂ.76/2000 ದಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂದಪಟ್ಟಂತೆ ಆಗಿರುವ ಮಾರಾಟವನ್ನು ತಳ್ಳಿ ಹಾಕುವಂತೆ ಇದೇ ಸಿವಿಲ್ ನ್ಯಾಯಾಲಯ ಪಾಂಡವಪುರ ಇಲ್ಲಿನ ಮಿಸ್ ನಂ.1/2006 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯವು ಗುಣಾಂಶಗಳ ಮೇಲೆ ತೀರ್ಮಾನಿಸಿ ಗುಣಾಂಶಗಳ ಮೇಲೆ ವಜಾ ಮಾಡಿರುತ್ತದೆ. ಮತ್ತು ಸದರಿ ಆದೇಶದ ವಿರುದ್ಧ 4 ನೇ ಪ್ರತಿವಾದಿಯು ಮಂಡ್ಯ ಜಿಲ್ಲಾ ಅಪರ ನ್ಯಾಯಾಲಯದಲ್ಲಿ ಎಂ.ಎ.ನಂ.2/2009 ರ ರೀತ್ಯಾ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ವಜಾಗೊಂಡಿರುತ್ತದೆ. ಮತ್ತೆ ಸದರಿ ಆದೇಶವನ್ನು ಮಂಡ್ಯ ಅಪರ ಜಿಲ್ಲಾ ನ್ಯಾಯಾಲಯದಲ್ಲಿ ಮಿಸ್ ನಂ.11/2009 ರಲ್ಲಿ ಅರ್ಜಿಯನ್ನು ಸಲ್ಲಿಸಿ, ಸದರಿ ಅರ್ಜಿಯು ವಜಾಗೊಂಡಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ವಾದಿಯರು ಪಕ್ಷಕಾರರಾಗಿದ್ದು, ಎಲ್ಲಾ ವಿಚಾರಗಳು ಅವರ ತಿಳುವಳಿಕೆಯಲ್ಲಿ ಇದ್ದಾಗ್ಯೂ ಸಹ ದುರುದ್ದೇಶದಿಂದ ಪ್ರಸ್ತುತ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ವಾದಿಯರು ಈ ಅರ್ಜಿಯನ್ನು ಈ ಪ್ರಕರಣದ ವ್ಯವಹರಣೆಯನ್ನು ನಿಧಾನಗೊಳಿಸಿ, 5 ನೇ ಪ್ರತಿವಾದಿಗೆ ತೊಂದರೆಯುಂಟು ಮಾಡಬೇಕೆಂಬ ಕಾರಣದಿಂದ ಸಲ್ಲಿಸಿರುತ್ತಾರೆ ಹಾಗೂ 5 ನೇ ಪ್ರತಿವಾದಿಯು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುತ್ತಾರೆ.

ವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ ನಂ.1/2011 ಇನ್ನು ಸಹ ಗುಣಾಂಶದ ಮೇಲೆ ಇತ್ಯರ್ಥವಾಗಿರುವುದಿಲ್ಲ. ಮತ್ತೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದು ಕಾನೂನು ಬಾಹಿರವಾಗಿರುತ್ತದೆ.

ಈಗಾಗಲೇ ನ್ಯಾಯಾಲಯಕ್ಕೆ ಪ್ರಸ್ತುತ ಅರ್ಜಿಯಲ್ಲಿನ ಪರಿಹಾರ ಕೋರಿ ನ್ಯಾಯಾಲಯಕ್ಕೆ ವಾದಿ/ಅರ್ಜಿದಾರರು ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂ.8 ನ್ನು ದಿನಾಂಕಃ 04.12.2023 ರಂದು ವಜಾಗೊಳಿಸಿರುವ ಕಾರಣ ಪುನಃ ಅದೇ ಪರಿಹಾರ ಕೋರಿ ಸಲ್ಲಿಸಿರುವ ಈ ಅರ್ಜಿಯು ಊರ್ಜಿತವಾದುದ್ದಲ್ಲ.

ವಾದಿಯರಿಗೆ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. ಆದಕಾರಣ ಈ ಅರ್ಜಿಯು ಊರ್ಜಿತವಾದುದ್ದಲ್ಲ.

**9.** ಪ್ರತಿವಾದಿ 6 ರಿಂದ 11 ರವರು ಮಧ್ಯಂತರ ಅರ್ಜಿ ಸಂಖ್ಯೆ 12 ಕ್ಕೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

**10.** ವಾದಿಯು ತಮ್ಮ ಮಧ್ಯಂತರ ಅರ್ಜಿಗೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿಕೊಂಡಿರುತ್ತಾರೆ.

1. Decree order of FDP No.1/2001
2. Commissioner report
3. Two RTC extracts
4. Three mutation register extracts
5. ದಿನಾಂಕ 07.09.2010 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿರುವ ಪ್ರಕಟಣೆ
6. Certified copy of memorandum
7. Certified copy of Award passed by LAO
8. Certified copy of notification U/sec.4(1) of LAA
9. Certified copy of two gazettes
10. Death certificate of Puttamma
11. Death certificate of Krishnegowda
12. Certified copy of judgment in O.S.No.465/1999
13. Certified copy of judgment and decree in LAC No.2/2016
14. Certified copy of memorandum

15. Certified copy of orders passed by the Hon'ble High Court of Karnataka in W.P.No.12762/2023 (GM-CPC)

16. Certified copy of application filed U/o 21 Rule 52 R/W/Sec.151 of CPC filed in Ex.No.23/2021

17. Certified copy of orders passed in Ex.23/2021 on IA.No.4

17. Certified copy of application filed U/o 1 Rule 10(2) R/W/Sec.151 of CPC filed in Ex.No.23/2021

17. Certified copy of orders passed in Ex.23/2021 on IA.No.5

18. Certified copy of application filed U/o 21 Rule 52 R/W/Sec.151 of CPC in Ex.No.23/2021

17. Certified copy of orders passed in Ex.23/2021 on IA.No.6

19. Certified copy of application filed U/o 1 Rule 10(2) R/W/Sec.151 of CPC filed in Ex.No.23/2021

20. Certified copy of objection filed by DHR No.2 for application U/o 1 Rule 10(2) R/W/Sec.151of CPC and application U/o 21 Rule 52 R/W/Sec.151 of CPC in Ex.No.23/2021.

21. Certified copy of objection filed by DHR for application filed U/o 21 Rule 52 R/W/Sec.151 of CPC and application filed U/o 1 Rule 10(2) R/W/Sec.151 of CPC and for Ex.No.23/2021.

17. Certified copy of orders passed in Ex.23/2021 on IA.No.7

22. Mutation register extracts

23. 13 RTC extracts

24. Certified copy of order sheet in FDP.No.1/2001

25. Certified copy of application filed U/sec.54 R/W/Sec.151 of CPC in FDP.No.1/2001

26. Certified copy of application filed U/sec.151 of CPC in FDP.No.1/2001

27. Certified copy of application filed U/o 26 Rule 9 R/W/Sec.151 of CPC in FDP.No.1/2001

28. Certified copy of Memo filed in FDP.No.1/2001

29. Certified copy of Commissioner report filed in FDP.No.1/2001.

30. Certified copy of sketch filed in FDP.No.1/2001 .

31. Certified copy of Mahazar report filed in FDP.No.1/2001.

31. Certified copy of Commissioner report with mahazar and notice filed in FDP.No.1/2001.

**11.** 5 ನೇ ಪ್ರತಿವಾದಿಯು ತಮ್ಮ ತಕರಾರಿಗೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿಕೊಂಡಿರುತ್ತಾರೆ.

1. Certified copy of judgment and decree in O.S.No.664/1999

2. Certified copy of order sheet in Ex.No.76/2000

3. Certified copy of petition filed in Ex.No.76/2000

4. Original Registered sale certificate

5. Certified copy of order passed in Mis.No.1/2006

6. Certified copy of order sheet in M.A.No.2/2009

7. Certified copy of miscellaneous appeal filed U/o XLIII Rule 1(j) of CPC in M.A.No.2/2009

8. Certified copy of order sheet in Misc.No.11/2009

9. Certified copy of miscellaneous appeal filed U/o XLI Rule 19 R/W/Sec.151 of CPC in Mis. Petition No.11/2009

10. Certified copy of Part-6a in ಕರ್ನಾಟಕ ರಾಜ್ಯ ಪತ್ರ

11. Certified copy of award notice

11. Certified copy of order sheet in LAC.No.2/2013

12. Certified copy of IA.No.4, application filed U/o 1 Rule 10(A) of CPC in LAC.No.2/2013

13. Certified copy of order sheet in LAC.No.2/2013

14. Certified copy of hand written RTC extracts of Sy.No.72/2

15. Computerized copies of M.R.No.55/2008-2009

16. Two Computerized RTC extracts of Sy.No.72/2

17. Computerized copy of M.R.No.18/2017-18

18. Two RTC extracts of Sy.No.181/1pai-P3

19. Certified copy of order sheet in O.S.No.58/2023.

20. Summons, notice, plaint and IAs in O.S.No.58/2023 pending before the Hon'ble Senior Civil Judge and JMFC, Pandavapura.

21. Zerox copy of ಕರ್ನಾಟಕ ಸರ್ಕಾರದ ನಡವಳಿಗಳು

**12.** ವಾದಿಯು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದಿ 5 ರಿಂದ 7 ರವರ ವಿರುದ್ಧ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಇತ್ಯರ್ಥವಾಗುವವರೆಗೆ ಷೆಡ್ಯೂಲ್ ಸ್ವತ್ತಿನ ಹಣವನ್ನು ಎಲ್.ಎ.ಸಿ.ನಂ.2/2013 ರಲ್ಲಿ ಠೇವಣಿ ಮಾಡದಂತೆ ಮತ್ತು ರಾಜೀ ವಾಡಿಕೊಳ್ಳದಂತೆ ಮಧ್ಯಂತರ ನಿರ್ಭಂಧಕಾಜ್ಞೆಯನ್ನು ಹೊರಡಿಸಲು ಕೋರಿರುತ್ತಾರೆ.

**13.** ಮಧ್ಯಂತರ ಅರ್ಜಿಯ ಷೆಡ್ಯೂಲ್ ಸ್ವತ್ತು ಈ ಕೆಳಗಿನಂತಿದೆಃ

<u>ಷೆಡ್ಯೂಲ್</u>

ಪಾಂಡವಪುರ ತಾಲ್ಲೂಕು,ಕಸಬಾ ಹೋಬಳಿ, ಪಾಂಡವಪುರ ಗ್ರಾಮದ ಸರ್ವೆ ನಂ.72/2 ರಲ್ಲಿ 0.20 ಗುಂಟೆ ಪೈಕಿ 0.5¾ ಗುಂಟೆಗೆ ಸಂಬಂಧಿಸಿದಂತೆ ಆಗುವ ಮೊಬಲಗನ್ನು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ನ್ಯಾಯಾಲಯದಲ್ಲಿರುವ ಎಲ್.ಎ.ಸಿ.ನಂ.2/2013 ರಲ್ಲಿ ಠೇವಣಿ ಮಾಡದಂತೆ ಮತ್ತು ರಾಜಿ ಮಾಡಿಕೊಳ್ಳದಂತೆ ಕೋರಿಕೊಳ್ಳಲಾಗಿದೆ.

**14.** ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ದಾವೆ ಸರ್ವೆ ನಂ.72/2002 ರಲ್ಲಿ 20 ಗುಂಟೆ ಪೈಕಿ 5 ¾ ಗುಂಟೆ ಸ್ವತ್ತು ವಾದಿಗಳ ಹಿಸ್ಸೆಗೆ ಅಸಲು ದಾವಾ ಸಂಖ್ಯೆ 465/1999 ರ ತೀರ್ಪು ಮತ್ತು ಡಿಕ್ರಿಯಂತೆ ಬಂದಿರುತ್ತದೆ. ಆನಂತರ ಎಫ್.ಡಿ.ಪಿ.ನಂ.1/2001 ಅರ್ಜಿಯ ಮೇರೆಗೆ ಡಿಕ್ರಿ ಆದೇಶದಂತೆ ವಾದಿಗಳ ಹಿಸ್ಸೆಗೆ ವಾದಿಗಳ ಹಿಸ್ಸಾ ಸ್ವತ್ತನ್ನು ಪಡೆದುಕೊಳ್ಳಲು ಅರ್ಜಿ

ಸಲ್ಲಿಸಿದ್ದು, ಸದರಿ ಸ್ವತ್ತಿನ ಖಾತೆಯು ಮೃತ ಪಟ್ಟಮ್ಮನ ಹೆಸರಿನಲ್ಲೇ 2010ರ ವರೆಗೂ ಮುಂದುವರೆದಿರುತ್ತದೆ. ಈ ಮಧ್ಯದಲ್ಲಿ ಪ್ರತಿವಾದಿ 6 ರವರು ಒಳಚರಂಡಿಯ ಉದ್ದೇಶದ ಆದೇಶಕ್ಕಾಗಿ ಜಮೀನನ್ನು ಭೂ ಸ್ವಾಧೀನ ಮಾಡಿಕೊಂಡಿದ್ದು, ಮೃತ ಪುಟ್ಟಮ್ಮನ ಹೆಸರಿಗೆ ನೋಟೀಸನ್ನು ನೀಡಿದ್ದು, ಅಂತಿಮ ಡಿಕ್ರಿ ಆದೇಶದಂತೆ ಕಂದಾಯ ಅಧಿಕಾರಿಗಳ ಮುಂದೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಾಗ, 2 ನೇ ಪ್ರತಿವಾದಿ ಚಂದ್ರೇಗೌಡ ನಾಗರಾಜು ಎಂಬುವವರಿಂದ ಕೈಸಾಲ ಪಡೆದಿದ್ದು, ಸದರಿ ನಾಗರಾಜ್ 2 ನೇ ಪ್ರತಿವಾದಿಯ ವಿರುದ್ಧ ಹಣ ವಸೂಲಾತಿ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿದ್ದು, 2 ನೇ ಪ್ರತಿವಾದಿ ಹಣ ಪಾವತಿಸದ ಕಾರಣ ಸರ್ವೆ ನಂ.72/2 ರ 20 ಗುಂಟೆ ಸ್ವತ್ತನ್ನು ನ್ಯಾಯಾಲಯದ ಹರಾಜಿನಲ್ಲಿ 5 ನೇ ಪ್ರತಿವಾದಿ ಹೆಚ್.ಜೆ.ದಿನೇಶ್ ಪಡೆದುಕೊಂಡಿರುತ್ತಾರೆ. ನಂತರ 5 ನೇ ಪ್ರತಿವಾದಿ ತನ್ನ ಹೆಸರಿಗೆ 20 ಗುಂಟೆ ಪೈಕಿ 5 ¾ ಗುಂಟೆ ವಾದಿಗಳ ಭಾಗಾಂಶಕ್ಕೆ ಬಂದ ಸ್ವತ್ತನ್ನು ಸಹ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದು, ಸದರಿ ವ್ಯವಹಾರವೂ 2 ನೇ ಪ್ರತಿವಾದಿ ಮತ್ತು ನಾಗರಾಜ್ ರವರ ಮಧ್ಯ ಇದ್ದು, ವಾದಿಗಳ ಹಿಸ್ಸೆಗೆ ಸಂಬಂಧಿಸಿರುವುದಿಲ್ಲ.

**15.** ಈ ಮಧ್ಯದಲ್ಲಿ 5 ನೇ ಪ್ರತಿವಾದಿಯು ಎಲ್.ಎ.ಸಿ.ನಂ.1/2013 ಮತ್ತು 2/2013 ರೀತಿಯ ಹೆಚ್ಚುವರಿ ಭೂ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ವಾದಿಗಳು ಮಧ್ಯಂತರ ಅರ್ಜಿ ಸಲ್ಲಿಸಿ, ತಮ್ಮನ್ನು ಪಕ್ಷಗಾರರನ್ನಾಗಿ ಸೇರಿಸಿಕೊಳ್ಳಲು ಕೋರಿದಾಗ, ಸದರಿ ಅರ್ಜಿಯು ವಜಾ ಆಗಿರುತ್ತದೆ. ಸದರಿ ಆದೇಶದ ವಿರುದ್ಧ ವಾದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P.No.34539/2018 ರೀತಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ವಜಾಗೊಂಡಿರುತ್ತದೆ. ನಂತರ ಎಲ್.ಎ.ಸಿ.ನಂ.2/2013 ರಲ್ಲಿ ಈ ದಾವೆಯಲ್ಲಿನ ಪ್ರತಿವಾದಿ 5 ರಿಂದ 7 ರವರ ನಡುವೆ ರಾಜೀ ಪ್ರಕ್ರಿಯೆ ಏರ್ಪಟ್ಟಿದ್ದು, ಆ ಸಂಬಂಧವಾಗಿ ಸಂಪೂರ್ಣ ಹಣವನ್ನು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪಾವತಿ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಸದರಿ ಹಣವನ್ನು ಎಲ್.ಎ.ಸಿ.ನಂ.2/2013 ರಲ್ಲಿ ಠೇವಣಿ ಮಾಡಿ ರಾಜೀ ಮಾಡಿಕೊಂಡರೇ ವಾದಿಗಳಿಗೆ ತುಂಬಲಾರದ ನಷ್ಠವುಂಟಾಗಿ ಅನಗತ್ಯ ವ್ಯಾಜ್ಯಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಅದನ್ನು ತಡೆ ಹಿಡಿದು ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶಕ್ಕೆ ಕೋರಿರುತ್ತಾರೆ. ವಾದಿಯು ಅಸಲು ದಾವಾ ಸಂಖ್ಯೆ 465/1999 ರನ್ಯಾಯಾಲಯದ ದೃಢೀಕೃತ ದಾಖಲೆಗಳು, ಎಫ್.ಡಿ.ಪಿ.1/2001 ರ ಅಂತಿಮ ಡಿಕ್ರಿ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳು ಸರ್ವೆ ನಂ.72/2 ರಲ್ಲಿ 5 ¾ ಗುಂಟೆಗೆ ಅವರು ಹಕ್ಕುಳ್ಳವರೆಂದು ತಿಳಿಯಪಡಿಸುತ್ತದೆ. ಆದರೆ ಮಧ್ಯಂತರ ಅರ್ಜಿಯ ಷೆಡ್ಯೂಲ್ ಸ್ವತ್ತು ಮತ್ತು ದಾವೆಯ ಷೆಡ್ಯೂಲ್ ಸ್ವತ್ತು ಬೇರೆ ಬೇರೆ ಆಗಿರುವುದು ಕಂಡು ಬರುತ್ತದೆ. ವಾದಿಗಳು ಈಗಾಗಲೇ ಹೇಳಿದಂತೆ ಎಲ್.ಎ.ಸಿ.ನಂ.2/2013 ರಲ್ಲಿ ಪಕ್ಷಗಾರರಾಗಿರುವುದಿಲ್ಲ. 5 ನೇ ಪ್ರತಿವಾದಿಯು

ಸಲ್ಲಿಸಿರುವ ಎಲ್.ಎ.ಸಿ.ನಂ.2/2013 ರಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಷ್ಟು ಮೊತ್ತ ಹೆಚ್ಚುವರಿ ಭೂ ಪರಿಹಾರವಾಗಿ ಆದೇಶವಾಗಿದೆ ಎಂದು ವಾದಿಗಳು ತಮ್ಮ ಮಧ್ಯಂತರ ಅರ್ಜಿಯಲ್ಲಿ ಹೇಳಿಕೊಂಡಿರುವುದಿಲ್ಲ. ತಮ್ಮ ದಾವಾ ಷೆಡ್ಯೂಲ್ ನ ಪರಿಹಾರದ ಮೊತ್ತವೂ ರೂ.2,22,832/- ಇದ್ದು, ಪ್ರಸ್ತುತ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಷ್ಟು ಮೊತ್ತಕ್ಕೆ ಆದೇಶವಾಗಿದೆ ಎಂಬುದು ತಿಳಿದು ಬಂದಿಲ್ಲ. ಬಹುಮುಖ್ಯವಾಗಿ ಸದರಿ ಆದೇಶವನ್ನು ತಡೆ ಹಿಡಿಯಲು ಈ ನ್ಯಾಯಾಲಯಕ್ಕೆ ಯಾವ ರೀತಿಯ ಅಧಿಕಾರ ಇದೆ ಎಂಬ ಬಗ್ಗೆ ವಾದಿಗಳು ದಾಖಲೆಗಳ ಮೂಲಕ ಪ್ರಸ್ತುತ ಪಡಿಸಬೇಕಾಗಿತ್ತು. ಈ ಹಂತದಲ್ಲಿ ನ್ಯಾಯಾಧಿಕಾರದ ವ್ಯಾಪ್ತಿಯ ಅಂಶವೂ ಪ್ರಶ್ನಿತ ಸಂಗತಿಯಾಗುತ್ತದೆ.

**16.** ಅರ್ಜಿಗೆ ವಿರುದ್ಧವಾಗಿ 5 ನೇ ಪ್ರತಿವಾದಿಯು ತಕರಾರು ಸಲ್ಲಿಸಿ, ದಾವಾ ಸ್ವತ್ತು ಮತ್ತು ಮಧ್ಯಕಾಲಿನ ಅರ್ಜಿಯ ಸ್ವತ್ತು ಬೇರೆ ಬೇರೆ ಇರುತ್ತದೆ. ಜಮೀನಿನ ಮೌಲ್ಯವೂ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ರೂ.2,00,00,000/- (ಎರಡು ಕೋಟಿ) ನಿಗಧಿಪಡಿಸಿದ್ದು, ಸದರಿ ಮೌಲ್ಯವೂ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಮೀರಿರುವುದರಿಂದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಈಗಾಗಲೇ ವಾದಿಗಳು ಸಲ್ಲಿಸಿರುವ ಸೇರ್ಪಡೆ ಅರ್ಜಿ ಎಲ್.ಎ.ಸಿ.ನಂ.2/2013 ರಲ್ಲಿ ವಜಾಗೊಂಡಿರುತ್ತದೆ. 5 ನೇ ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಜಾರಿ ಅರ್ಜಿ ಸಂಖ್ಯೆ 76/2000 ರಲ್ಲಿ ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬೆಲೆಗೆ ಖರೀದಿಸಿದ್ದು, ಖರೀದಿ ಪತ್ರವೂ ನೊಂದಾವಣೆ ಆಗಿರುತ್ತದೆ. ಎಲ್ಲಾ ವಿಷಯ ತಿಳಿದಿದ್ದರೂ ಸಹ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, 5 ನೇ ಪ್ರತಿವಾದಿಯ ವ್ಯವಹರಣೆಯನ್ನು ನಿಧಾನಗೊಳಿಸಿ, ತೊಂದರೆ ಕೊಡಲು ಪ್ರಯತ್ನಿಸುತ್ತಿದ್ದು, ಅವರಿಗೆ ಆರ್ಥಿಕ ನಷ್ಟವುಂಟಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಲು ಕೋರಿರುತ್ತಾರೆ.

**17.** 5 ನೇ ಪ್ರತಿವಾದಿಯವರ ತಕರಾರಿನಲ್ಲಿ ಸಲ್ಲಿಸಿರುವಂತೆ ದಾಖಲೆಗಳನ್ನು ಹಾಜರುಪಡಿಸಿಕೊಂಡಿದ್ದು, ದಿನಾಂಕಃ 23.10.2008 ರಂದು ಇದೇ ನ್ಯಾಯಾಲಯದಿಂದ 5 ನೇ ಪ್ರತಿವಾದಿಯ ಹೆಸರಿಗೆ ಸೇಲ್ ಸರ್ಟಿಫಿಕೇಟ್ ಸರ್ವೆ ನಂ.72 ಪೈಕಿ ಪಿ6 ಪಿ1 20 ಗುಂಟೆಗೆ ನೊಂದಣಿ ಆಗಿರುವುದು ಕಂಡು ಬರುತ್ತದೆ. ದಾಖಲೆಗಳಿಂದ 4 ನೇ ಪ್ರತಿವಾದಿ Mis.No.1/2006 ರಲ್ಲಿ ಸದರಿ ಸೇಲ್ ಪ್ರೊಕ್ಲಮೇಷನ್ ಅನ್ನು ಪ್ರಶ್ನಿಸಿದ್ದು, ವಜಾಗೊಂಡಿರುವುದು ಕಂಡು ಬರುತ್ತದೆ. ಸದರಿ Mis.No.1/2006 ರಲ್ಲಿ ವಾದಿಗಳು ಎದುರುದಾರ 4 ರಿಂದ 6 ಎಂದು ಪಕ್ಷಗಾರರಾಗಿರುತ್ತಾರೆ. ಸದರಿ ಆದೇಶದ ವಿರುದ್ಧ M.A.No.2/2009 ಮೇಲ್ಮನವಿಯನ್ನು ಸಲ್ಲಿಸಿದ್ದು, ದಿನಾಂಕಃ 23.01.2009 ರಂದು ಸದರಿ ಮೇಲ್ಮನವಿಯು ವಜಾಗೊಂಡಿರುತ್ತದೆ. ಸದರಿ ಆದೇಶದ ವಿರುದ್ಧ Mis.No.11/2009

ಸಲ್ಲಿಸಿಕೊಂಡಿದ್ದು, ಸದರಿ Mis.No.11/2009, ದಿನಾಂಕಃ 29.06.2009 ರಂದು ಮುಕ್ತಾಯಗೊಂಡಿರುತ್ತದೆ. ಆನಂತರದ ಮುಂದುವರೆದ M.A.No.2/2009 ರ ಆದೇಶಗಳು ನ್ಯಾಯಾಲಯದಲ್ಲಿ ಕಂಡು ಬಂದಿಲ್ಲ. ಆ ಕಾರಣದಿಂದ ಮೇಲ್ನೋಟಕ್ಕೆ 5 ನೇ ಪ್ರತಿವಾದಿಯ ವಿರುದ್ಧ ಈ ನ್ಯಾಯಾಲಯದಲ್ಲಿ ನೀಡಿರುವ ಸೇಲ್ ಸರ್ಟಿಫಿಕೇಟ್ ಸ್ಥಿರೀಕರಿಸಲ್ಪಟ್ಟಿರುತ್ತದೆ.

**18.** ನ್ಯಾಯಾಲಯದಲ್ಲಿ ವಾದಿಯು ಸ್ವತಃ ತನ್ನ ಪ್ರಮಾಣ ಪತ್ರಿಕೆಯಲ್ಲಿ ಎಲ್.ಎ.ಸಿ.ನಂ.2/2013 ರಲ್ಲಿ ಅವಶ್ಯಕ ಪಕ್ಷಗಾರರಾಗಿ ಸೇರಿಕೊಳ್ಳಲು ತಾವು ಸಲ್ಲಿಸಿರುವ ಅರ್ಜಿಯು ವಜಾ ಆಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವೂ ಸಹ ಸದರಿ ಅರ್ಜಿಯನ್ನು W.P.No.34539/2018 ರಲ್ಲಿ ವಜಾಗೊಳಿಸಿದ್ದು, ಮಾನ್ಯ ನ್ಯಾಯಾಲಯವೂ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ವಾದಿಗಳಿಗೆ ಹಕ್ಕಿದ್ದ ಪಕ್ಷದಲ್ಲಿ ಅಸಲು.ದಾವಾ.ಸಂಖ್ಯೆ 415/2011 ರಲ್ಲಿ ಇತ್ಯರ್ಥಪಡಿಸಿಕೊಳ್ಳುವಂತೆ ಆದೇಶ ಮಾಡಿರುವುದಾಗಿ ಹೇಳಿಕೊಂಡಿದ್ದು, ಪ್ರಸ್ತುತ ಈ ದಾವೆಯಲ್ಲಿ ವಾದಿಗಳು ದಿನಾಂಕಃ 21.08.2021 ರಂದು ವಿಚಾರಣೆಯನ್ನು ನಡೆಸಿ, ತಮ್ಮ ಪರವಾಗಿ ನಿಪಿ-1 ರಿಂದ 8 ದಾಖಲೆಗಳನ್ನು ಮತ್ತು ದಿನಾಂಕಃ 27.03.2024 ರಂದು ನಿಪಿ-9 ರಿಂದ 19 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆದಾದ ನಂತರ ಮುಂದುವರೆದ ಪಾಟೀ ಸವಾಲಿಗೆ ಪ್ರಕರಣವೂ ಮುಂದೂಡಿದ್ದು, ಪ್ರಸ್ತುತ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಷೆಡ್ಯೂಲ್ ಆಸ್ತಿಯಲ್ಲಿ ವಾದಿಗಳಿಗೆ ಹಕ್ಕು ಇದೆಯೋ ಇಲ್ಲವೋ ಎಂಬ ಅಂಶವನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟರೆ ಮಾತ್ರ ತಿಳಿದು ಬರುತ್ತದೆ. ಈ ಹಂತದಲ್ಲಿ ಹಾಜರುಪಡಿಸಿರುವ ದಾಖಲೆಗಳಿಂದ ಮತ್ತು ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ಸ್ವತ್ತು ದಾವೆಯ ವಸ್ತು ವಿಷಯಕ್ಕೆ (subject matter) ವಿಭಿನ್ನವಾಗಿದ್ದು, ವಾದಿಯ ಹಕ್ಕನ್ನು ತಿಳಿದುಕೊಳ್ಳಲು ಮುಕ್ತನ್ಯಾಯಾಲಯದಲ್ಲಿ ಪೂರ್ಣ ಹಂತದ ವಿಚಾರಣೆಯು ಆಗಬೇಕಾಗುತ್ತದೆ. ಬಹುಮುಖ್ಯವಾಗಿ ಎಲ್.ಎ.ಸಿ.ನಂ.2/2013 ರಲ್ಲಿ ವಾದಿಗಳು ಪಕ್ಷಗಾರರಾಗಿಲ್ಲ ಮತ್ತು ಸದರಿ ಪ್ರಕರಣದಲ್ಲಿನ ಸ್ವತ್ತು ನ್ಯಾಯಾಲಯದಲ್ಲಿ ಇರುವ ದಾವಾ ಸ್ವತ್ತು ಒಂದಕ್ಕೊಂದು ಅಜಗಜಾಂತರ ವ್ಯತ್ಯಾಸದಲ್ಲಿದ್ದು, ಈ ನ್ಯಾಯಾಲಯವೂ ಸದರಿ ಸ್ವತ್ತಿನ ವಸ್ತು ವಿಷಯವನ್ನು ಚರ್ಚಿಸಲು ಮೌಲ್ಯ ನ್ಯಾಯಾಧಿಕಾರದ ಮತ್ತು ಪ್ರಾದೇಶಿಕ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ವಾದಿಗಳು ತಮ್ಮ ಪ್ರಮಾಣ ಪತ್ರಿಕೆಯಲ್ಲಿ ಎಲ್.ಎ.ಸಿ.ನಂ.2/2013 ರಲ್ಲಿ ಇರುವ ಪರಿಹಾರ ಮೊತ್ತವನ್ನು ನಮೂದಿಸಿರುವುದಿಲ್ಲ.

**19.** ಈ ಹಂತದಲ್ಲಿ ಕಾನೂನಿಗೊಳಪಟ್ಟ ಕೆಲವು ಅಂಶಗಳನ್ನು ನಮೂದಿಸುವುದು ಸೂಕ್ತವಾಗಿರುತ್ತದೆ.

Section 41 in The Specific Relief Act, 1963

41. Injunction when refused.—

An injunction cannot be granted—(a)to restrain any person from prosecuting a judicial proceeding pending at the institution of the suit in which the injunction is sought, unless such restraint is necessary to prevent a multiplicity of proceedings;

(b)to restrain any person from instituting or prosecuting any proceeding in a court not subordinate to that from which the injunction is sought;

(c)to restrain any person from applying to any legislative body;

(d)to restrain any person from instituting or prosecuting any proceeding in a criminal matter;

(e)to prevent the breach of a contract the performance of which would not be specifically enforced;

(f)to prevent, on the ground of nuisance, an act of which it is not reasonably clear that it will be a nuisance;

(g)to prevent a continuing breach in which the plaintiff has acquiesced;

(h)when equally efficacious relief can certainly be obtained by any other usual mode of proceeding except in case of breach of trust;

(i)when the conduct of the plaintiff or his agents has been such as to disentitle him to the assistance of the court;

(j)when the plaintiff has no personal interest in the matter.

ನಿರ್ಧಿಷ್ಟ ಪರಿಹಾರ ಕಾಯ್ದೆ ಕಲಂ.41 ರ (ಬಿ) ರಡಿಯಲ್ಲಿ ಯಾವ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆಯನ್ನು ಕೇಳಲಾಗುತ್ತಿದೆಯೋ ಅದಕ್ಕೆ ಅಧೀನವಾಗಿರದ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡದಂತೆ ಅಥವಾ ನಡೆಸದಂತೆ ಯಾವನೇ ವ್ಯಕ್ತಿಯು ಪ್ರತಿಬಂಧಿಸಲು ನಿರ್ಭಂಧಕಾಜ್ಞೆಯನ್ನು ಕೊಡಲಾಗುವುದಿಲ್ಲ. ಪ್ರಸ್ತುತ ಈ ನ್ಯಾಯಾಲಯವೂ

ಎಲ್.ಎ.ಸಿ.ಪ್ರಕರಣಗಳನ್ನು ನಡೆಸುವ ಪ್ರಾದೇಶಿಕ ನ್ಯಾಯಾ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಸದರಿ ಪ್ರಕರಣವನ್ನು ನಡೆಸಲು ಮಾನ್ಯ ಹಿರಿಯ ಶ್ರೇಣಿಯ ನ್ಯಾಯಾಲಯವೂ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದು, ಸದರಿ ನ್ಯಾಯಾಲಯವೂ ಈ ನ್ಯಾಯಾಲಯಕ್ಕಿಂತ ಅಧೀನವಾದ ನ್ಯಾಯಾಲಯವಾಗಿರುವುದಿಲ್ಲ. ಬಹುಮುಖ್ಯವಾಗಿ ಮಾನ್ಯ ಹಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ ಎಲ್.ಎ.ಸಿ.ನಂ.2/2013 ಪ್ರಕರಣವು ಬಾಕಿ ಇದ್ದು, ಸದರಿ ನ್ಯಾಯಾಲಯಕ್ಕೆ ಪ್ರತಿವಾದಿ 6 ಮತ್ತು 7 ರವರು ಹೆಚ್ಚಿನ ಪರಿಹಾರದ ಹಣವನ್ನು ಠೇವಣೆ ಮಾಡದಂತೆ ಮತ್ತು ರಾಜೀ ಮಾಡಿಕೊಳ್ಳದಂತೆ ನಿರ್ದೇಶಿಸುವ ಅಧಿಕಾರವೂ ನಿರ್ಧಿಷ್ಟ ಪರಿಹಾರ ಕಾಯ್ದೆ ಕಲಂ.41 ರ (ಬಿ) ರಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ.

**20.** ಅದರ ಜೊತೆಗೆ ಮುಖ್ಯವಾಗಿ ಕರ್ನಾಟಕ ಸಿವಿಲ್ ರೂಲ್ಸ್ ಆಫ್ ಪ್ರಾಕ್ಟೀಸ್ ನಲ್ಲಿ ನಿಯಮ 23 ಈ ಕೆಳಗಿನಂತೆ ಸೂಚಿಸುತ್ತದೆ.

<u>Karnataka Civil Rules of Practice- Rules-23 read as thus:</u>

> "23. There shall be a separate application in respect of each distinct prayer. When several prayers are combined in one application, the Court may direct the applicant to confine the application only to one of such prayers and to file a separate application in respect of each of the others."

ಮೇಲಿನ ನಿಯಮದಡಿ ಒಂದೊಂದು ಪರಿಹಾರಕ್ಕೂ ಪ್ರತ್ಯೇಕವಾದ ಮಧ್ಯಂತರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಹಲವು ಪರಿಹಾರಗಳನ್ನು ಸೇರಿಸಿ, ಒಟ್ಟಾಗಿ ಒಂದೇ ಅರ್ಜಿಯಲ್ಲಿ ಕೇಳಲು ಬರುವುದಿಲ್ಲ. ಪ್ರಸ್ತುತ ವಾದಿಗಳು ಷೆಡ್ಯೂಲ್ ಸ್ವತ್ತಿನ ಹಣವನ್ನು ಎಲ್.ಎ.ಸಿ.ನಂ.2/2013 ರಲ್ಲಿ ಪ್ರತಿವಾದಿ 6 ಮತ್ತು 7 ರವರು ಠೇವಣಿ ಮಾಡದಂತೆ ಮತ್ತು ಮತ್ತೊಂದು ಪರಿಹಾರವಾಗಿ ಸದರಿ ನ್ಯಾಯಾಲಯದಲ್ಲಿ ರಾಜೀ ಮಾಡಿಕೊಳ್ಳದಂತೆ ನಿರ್ಭಂದಕಾಜ್ಞೆಯನ್ನು ಕೋರಿರುವುದು ಕಾನೂನಿನಡಿ ಊರ್ಜಿತವಾಗಿಲ್ಲ.

**21.** ಮೇಲಿನ ಎಲ್ಲಾ ಚರ್ಚಿತ ಕಾನೂನಿನ ಸಂಗತಿಗಳು ಮತ್ತು ದಾಖಲೆಗಳಿಂದ ಮಧ್ಯಂತರ ಅರ್ಜಿ ಮೇಲ್ನೋಟಕ್ಕೆ ವಾದಿಯ ಪರವಾಗಿ ಸಾಭೀತು ಆಗಬಹುದಾದಂತಹ ಪ್ರಕರಣವೆಂದು ತೋರ್ಪಡಿಸಿರುವುದಿಲ್ಲ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಮತ್ತು 5 ನೇ ಪ್ರತಿವಾದಿ ಸಲ್ಲಿಸಿರುವ ತಕರಾರು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಪ್ರಸ್ತುತ ದಾವಾ ಸ್ವತ್ತಿನ ವಸ್ತು ವಿಷಯ ಮತ್ತು ಮಧ್ಯಂತರ ಅರ್ಜಿಯ ವಸ್ತು ವಿಷಯ ವಿಭಿನ್ನವಾಗಿದ್ದು, ಈ ನ್ಯಾಯಾಲಯವೂ

ಮಧ್ಯಂತರ ಅರ್ಜಿಯ ಪರಿಹಾರವನ್ನು ನೀಡಲು ಪ್ರಾದೇಶಿಕ ಮತ್ತು ಮೌಲ್ಯಾಧಿಕಾರದ ನ್ಯಾಯಾ ವ್ಯಾಪ್ತಿಯನ್ನು ಹೊಂದಿಲ್ಲವೆಂದು ಅಭಿಪ್ರಾಯಿಸುತ್ತಾ, ಆ ಕಾರಣ ಸದರಿ ಮಧ್ಯಂತರ ಅರ್ಜಿಯು ವಾದಿಗಳ ಪರವಾಗಿ ಸಾಭೀತಾಗಬಹುದಾದಂತಹ ಪ್ರಕರಣವಾಗಿಲ್ಲದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. **ಆ ಕಾರಣ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**22. <u>ಅಂಶ-2ಃ</u>-** ಅಂಶ-1 ರಲ್ಲಿ ವಿವರಿಸಿದ ಕಾರಣಗಳ ಸಹಿತ, ಮಧ್ಯಂತರ ಅರ್ಜಿಯ ಸ್ವತ್ತಿನಲ್ಲಿ ವಾದಿಗಳಿಗೆ ಹಕ್ಕಿದೆಯೋ ಇಲ್ಲವೋ ಎಂಬ ಬಗ್ಗೆ ತಿಳಿದುಕೊಳ್ಳಲು ನ್ಯಾಯಾಲಯದಲ್ಲಿ ಗುಣಾಂಶಗಳ ಮೇಲಿನ ವಿಚಾರಣೆಯ ಅವಶ್ಯಕತೆ ಇದ್ದು, ಪ್ರತಿವಾದಿ 6 ಮತ್ತು 7 ರವರ ವಿರುದ್ಧ ನಿರ್ಭಂಧಕಾಜ್ಞೆ ಯನ್ನು ನಿರ್ದೇಶಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಮತ್ತು ಪ್ರಸ್ತುತ ಅರ್ಜಿ ಊರ್ಜಿತವಲ್ಲವೆಂದು ಅಭಿಪ್ರಾಯಿಸಿರುವ ಕಾರಣ, ಅನುಕೂಲತಾ ಸಿದ್ಧಾಂತವು ವಾದಿಗಳ ಪರವಾಗಿ ಇಲ್ಲದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. **ಆ ಕಾರಣ ಅಂಶ-2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**23. <u>ಅಂಶ-3ಃ</u>-** ಮೇಲೆ ವಿವರಿಸಿದ ಕಾರಣಗಳ ಸಹಿತ, ನಿರ್ದಿಷ್ಟ ಪರಿಹಾರ ಅಧಿನಿಯಮ 1963 ರ ಕಲಂ-37 ರ ಜೊತೆಗೂಡಿ, ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-39 ನಿಯಮ-1 ರಲ್ಲಿ ಉಪಬಂಧಿಸಿದ ನಿಯಮಗಳ ಅನ್ವಯ, ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಯಾವ ಸಂದರ್ಭಗಳಲ್ಲಿ ನೀಡಬಹುದೆಂದು ವಿವರಿಸುತ್ತದೆ. ದಾವಾ ಸ್ವತ್ತನ್ನು ದಾವೆಯ ಯಾವುದೇ ಪಕ್ಷಗಾರನು ಹಾಳು ಮಾಡುತ್ತಾನೆ ಅಥವಾ ಅದಕ್ಕೆ ಹಾನಿಯುಂಟು ಮಾಡುತ್ತಾನೆ ಅಥವಾ ಅದನ್ನು ಪರಭಾರೆ ಮಾಡುತ್ತಾನೆ. ಹಾಗೆ ಮಾಡಿದರೆ ವಾದಿಗೆ ತುಂಬಬಾರದ ಹಾನಿಯಾಗುತ್ತದೆ. ಎದುರು ಪಕ್ಷಗಾರನಿಗೆ ಯಾವ ಹಾನಿ ಆಗುವುದಿಲ್ಲ ಎಂಬ ಸಂಗತಿಯನ್ನು ಮೇಲ್ನೋಟಕ್ಕೆ ವಾದಿಯು ತೋರಿಸಲ್ಪಟ್ಟರೇ ಮಾತ್ರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ಅದು ಅಲ್ಲದೆ ನಿರ್ದಿಷ್ಟ ಪರಿಹಾರ ಅಧಿನಿಯಮ 1963 ಕಲಂ 41 ರಲ್ಲಿ ಉಪಬಂಧಿಸಿದ ನಿಯಮಗಳ ಅನ್ವಯ, ನಿರ್ಬಂಧಕಾಜ್ಞೆಯನ್ನು ಯಾವಾಗ ನೀಡಲು ಬರುವುದಿಲ್ಲ ಎಂಬುದನ್ನು ವಿವರಿಸಿರುತ್ತಾರೆ. ವಾದಿಗಳು ಈಗಾಗಲೇ ಚರ್ಚಿಸಿದಂತೆ ವಸ್ತು ವಿಷಯದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ಮೂಲಕ ಸಾಭೀತು ಪಡಿಸುವ ಅವಶ್ಯಕತೆ ಇದೆ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಪ್ರತಿವಾದಿ 6 ಮತ್ತು 7 ರವರು ಅಥವಾ ಇತರೆ ಪ್ರತಿವಾದಿಗಳು ಎಲ್.ಎ.ಸಿ.ನಂ.2/2013 ರಲ್ಲಿ ಪರಿಹಾರದ ಮೊತ್ತದ ಹಣವನ್ನು ಠೇವಣಿ

ಮಾಡದಂತೆ ಮತ್ತು ರಾಜೀ ಮಾಡಿಕೊಳ್ಳದಂತೆ ಎರಡೂ ಪರಿಹಾರವನ್ನು ಕೇಳಿರುವ ಅಂಶಗಳು ವಾದಿಗಳ ವಾದಕ್ಕೆ ಪೂರಕವಾಗಿ ಯುಕ್ತ ಖಚಿತ ಮತ್ತು ಸ್ಪಷ್ಟತೆಯಿಂದ ತೋರಿಸಲ್ಪಡುವ ದಾಖಲಾತಿಗಳ ವಿಫಲತೆಯನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. **ಆ ಕಾರಣ ಅಂಶ-3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**24.** **ಅಂಶ-4ಃ-** ಅಂಶ 1 ರಿಂದ 3 ರಲ್ಲಿ ವಿವರಿಸಿದ ಕಾರಣಗಳ ಸಹಿತ ಈ ಕೆಳಗಿನಂತೆಃ

## ಆದೇಶ

**ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-39 ನಿಯಮ-1** ಮತ್ತು **2ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ-I2 ನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.**

(ಶೀಘ್ರಲಿಪಿಗಾರಳಿಗೆ ಉಕ್ತಲೇಖನ ನೀಡಿದ್ದು, ಸದರಿಯವರು ಬೆರಳಚ್ಚು ಮಾಡಿದ ನಂತರ ಓದಿ ಪರಿಶೀಲಿಸಿ, ಪರಿಷ್ಕರಿಸಿ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 11 ನೇ ಸೆಪ್ಟೆಂಬರ್ 2024 ರಂದು ಸದರಿ ಆದೇಶವನ್ನು ಘೋಷಿಸಲಾಗಿದೆ.)

**(ಪಾರ್ವತಮ್ಮ.ಬಿ)**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಪಾಂಡವಪುರ.**